## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 109 (143)
ಸದಸ್ಯರ ಹೆಸರು : ಶ್ರೀ ಶರವಣ ಟಿ. ಎ. (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.08.2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಫಲಿತಾಂಶ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಾಗುತ್ತಿರುವುದಕ್ಕೆ ಕಾರಣಗಳೇನು; | **ಪ್ರೌಢಶಾಲೆಗೆ ಸಂಬಂಧಿಸಿದಂತೆ**<br><br>ಅಸರ್ ವರದಿ-2024 ಹಾಗೂ PARAKH Rashtriya Sarrvekshan 2024 ರ ಸಮೀಕ್ಷೆಗಳಲ್ಲಿ Literacy ಮತ್ತು Numearcy ಎರಡರಲ್ಲಿಯೂ 1ನೇ ತರಗತಿಯಿಂದ ಮುಂದುವರೆದ ತರಗತಿಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆಯು ಕಡಿಮೆಯಾಗಿರುವುದರಿಂದ 10 ನೇ ತರಗತಿಯ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ.<br><br>**ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ**<br><br>ಪ್ರತಿ ಕ್ರಮಾನುಗತ ಶೈಕ್ಷಣಿಕ ವರ್ಷಗಳಲ್ಲಿ ಫಲಿತಾಂಶದಲ್ಲಿ ಏರಿಳಿತ ಸಾಮಾನ್ಯವಾಗಿರುತ್ತದೆ. 2024-25ನೇ ಸಾಲಿನ ಒಟ್ಟಾರೆ ಫಲಿತಾಂಶ ಕುಸಿತವಾಗಿರುವ ಹಿನ್ನೆಲೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶ ಸಹ ಕಡಿಮೆಯಾಗಿದೆ.<br><br>ಪ್ರಸ್ತುತ ಫಲಿತಾಂಶವನ್ನು ಸುಧಾರಣೆ ಮಾಡಲು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. |
| ಆ) | ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಭೋಧನೆ ಹೊರತುಪಡಿಸಿ ಯಾವ ಹೆಚ್ಚುವರಿ ಕೆಲಸಗಳನ್ನು ನೀಡಲಾಗುತ್ತಿದೆ; | ಚುನಾವಣಾ ಕಾರ್ಯ, ಜಾತಿ ಗಣತಿ, ಬಿ.ಎಲ್.ಓ ಕಾರ್ಯ ನಿರ್ವಹಣೆ, ತರಬೇತಿ ಇತ್ಯಾದಿ. |
| ಇ) | ಈ ಅನ್ಯ ಕೆಲಸದ ಹೊರೆ ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ದಿನಾಂಕ: 01.07.2025 ರ ಸರ್ಕಾರದ ಸುತ್ತೋಲೆಯ ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ಶಾಲೆಯ ಸಮಯದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶಾಲೆಯಲ್ಲಿಯೇ ಹಾಜರಿದ್ದು ಶಿಕ್ಷಣದ ಹಕ್ಕು ಕಾಯ್ದೆಯ ಅಡಿಯಲ್ಲಿ ಪ್ರತಿದಿನ ಶಾಲೆಯ ಹಂತದಲ್ಲಿ ಬೋಧನೆ ಮತ್ತು ಕಲಿಕೆ ನಡೆಸಲು ಉತ್ತಮ ಬೋಧನೆ ನೀಡಲು ಶಿಕ್ಷಕರು ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಸಂಪೂರ್ಣವಾಗಿ ಶಾಲೆಯಲ್ಲಿಯೇ ಇರುವುದು ಕಡ್ಡಾಯಗೊಳಿಸಲಾಗಿದೆ. |

| | | |
|---|---|---|
| | | ಬೋಧನಾ ಅವಧಿಯಲ್ಲಿ ಯಾವುದೇ ಸಮಾಲೋಚನಾ ಸಭೆ, ತರಬೇತಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ಅಡಚಣೆಯಾಗದಂತೆ ಭಾಗಿಯಾಗಿ ಬೋಧನೆಗೆ ಕ್ರಮವಹಿಸಲು ಸೂಚನೆ ನೀಡಲಾಗಿದ್ದು, ಸದರಿ ಸುತ್ತೋಲೆಯ ನಿಯಮಗಳನ್ನು ಪಾಲಿಸಲಾಗುತ್ತಿದೆ. |
| ಈ) | ಶಾಲೆ ನಡೆಯುವ ದಿನಗಳ ಸಂಖ್ಯೆಯನ್ನು ಅಧಿಕಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು). | RTE ಕಾಯ್ದೆ ಅನುಸಾರ Section 19 ಮತ್ತು 25 ರ ಕ್ರಮ ಸಂಖ್ಯೆ 03 ರಲ್ಲಿ ಶಾಲೆ ನಡೆಯುವ ದಿನಗಳು 220 ಎಂದು ನಿಗಧಿಪಡಿಸಿದೆ. ಸದರಿ ಅಂಶದಂತೆ ದಿನಾಂಕ:02.04.2025ರ ಜ್ಞಾಪನದಲ್ಲಿ ಶಾಲಾ ನಡೆಯುವ ದಿನಗಳು 220 ಎಂದು ನಿಗಧಿಪಡಿಸಲಾಗಿದೆ.<br><br>ಪ್ರಸ್ತುತ ಶಾಲಾ ನಡೆಯುವ ದಿನಗಳನ್ನು ಅಧಿಕಗೊಳಿಸುವ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಇಪಿ 283 ಎಸ್‌ಎಲ್‌ಬಿ .2025

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**